# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1228
ಸದಸ್ಯರ ಹೆಸರು : ಶ್ರೀ ರಿಜ್ವಾನ್ ಅರ್ಷದ್
ಉತ್ತರಿಸುವ ದಿನಾಂಕ: : 21-12-2018
ಉತ್ತರಿಸುವವರು : ಉಪ ಮುಖ್ಯಮಂತ್ರಿಯವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2006-07ರಿಂದ ಈವರೆಗೂ ಬೆಂಗಳೂರು ಅಭಿವೃದ್ಧಿಗಾಗಿ ಕೈಗೊಳ್ಳಲಾದ ಕ್ರಮಗಳ ಬಗ್ಗೆ ಆಡಳಿತಾತ್ಮಕ ವರದಿಯನ್ನು ಮಂಡನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ; | ಬಂದಿದೆ.<br>2015-16ನೇ ಸಾಲಿನಲ್ಲಿ 2006-07 ರಿಂದ 2011-12ನೇ ಸಾಲಿನ ವರೆಗಿನ 6 ವರ್ಷಗಳ ಆಡಳಿತ ವರದಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಮಂಡಿಸಲಾಗಿರುತ್ತದೆ.<br>2012-13ನೇ ಸಾಲಿನಿಂದ 2016-17 ರವರೆಗಿನ ಆಡಳಿತ ವರದಿಗಳನ್ನು ಮಾನ್ಯ ಉಪ ಮಹಾಪೌರರ ಸೂಚನೆಯಂತೆ ಮುಂದಿನ 2 ತಿಂಗಳೊಳಗಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. |
| ಆ | ಕಳೆದ 12 ವರ್ಷಗಳಿಂದ ವರದಿ ಮಂಡಿಸದೇ ಇರುವುದರಿಂದ ಬೆಂಗಳೂರು ಅಭಿವೃದ್ಧಿಗಾಗಿ ಕೈಗೊಳ್ಳಲಾದ ಆಡಳಿತಾತ್ಮಕ ಕ್ರಮ, ನ್ಯಾಯಾಲಯ ಪ್ರಕರಣ ಮತ್ತು ಇನ್ನಿತರ ಅಂಶಗಳ ಮಾಹಿತಿ ಲಭ್ಯವಿಲ್ಲದೆ ತೊಂದರೆ ಆಗಿದ್ದು ಈ ಬಗ್ಗೆ ಮಾಹಿತಿ ನೀಡುವುದು; | ಕ್ರಮ ಸಂಖ್ಯೆ-ಅ ರಲ್ಲಿ ಈಗಾಗಲೇ ನಮೂದಿಸಿರುವಂತೆ 2006-07 ನೇ ಸಾಲಿನಿಂದ 2011-12 ನೇ ಸಾಲಿನವರೆಗೆ ಬರುವ 6 ವರ್ಷಗಳ ಆಡಳಿತ ವರದಿಯನ್ನು ಮಂಡಿಸಲಾಗಿದ್ದು, ಮಂಡಿಸಲು ವಿಳಂಬವಾಗಿದ್ದ ಕಾರಣ ಯಾವುದೇ ತೊಂದರೆಯಾಗಿರುವುದಿಲ್ಲ. |
| ಇ | ಇಷ್ಟು ಸುಧೀರ್ಘ ಕಾಲ ಆಡಳಿತಾತ್ಮಕ ವರದಿ ವಿಳಂಬಕ್ಕೆ ಕಾರಣಗಳೇನು; ಇದರ ಜವಾಬ್ದಾರಿ ಯಾರದಾಗಿರುತ್ತದೆ, ವಿಳಂಬಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಯಾವಾಗ ವರದಿ ಮಂಡಿಸಲಾಗುವುದು? (ಸ್ಪಷ್ಟ ಮಾಹಿತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಕ್ರೋಢೀಕರಿಸುವ ಕೆಲಸವು ಸಾಂಖ್ಯಿಕ ವಿಭಾಗದ್ದಾಗಿದ್ದು, ಸಾಂಖ್ಯಿಕ ಶಾಖೆಯಿಂದ ಜಂಟಿ ಆಯುಕ್ತರುಗಳು ಹಾಗೂ ಇತರೆ ವಲಯ ಮಟ್ಟದ ಅಧಿಕಾರಿಗಳೊಂದಿಗೆ ಹಲವಾರು ಪತ್ರ ವ್ಯವಹಾರ ನಡೆಸಿದ್ದು, ಮಾಹಿತಿ ಕ್ರೋಢೀಕರಣವಾಗದೇ ಇದ್ದ ಕಾರಣ ವಿಳಂಬವಾಗಿರುತ್ತದೆ.<br>ಸದರಿ ವರದಿಗಳನ್ನು ಪಾಲಿಕೆಯ ಕೌನ್ಸಿಲ್ ಸಭೆಗೆ ಮಂಡಿಸುವ ಜವಬ್ದಾರಿಯು ಉಪ ಮಹಾಪೌರರವರದ್ದಾಗಿರುತ್ತದೆ. ವರದಿ ಮಂಡಿಸಲು ಅಗತ್ಯವಿರುವ ಮಾಹಿತಿಗಳನ್ನು ಸಕಾಲಕ್ಕೆ ನೀಡದ ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿರುತ್ತದೆ.<br>ಫೆಬ್ರವರಿ-2019ರಲ್ಲಿ, 2012-13ನೇ ಸಾಲಿನಿಂದ 2016-17ನೇ ಸಾಲಿನ ಆಡಳಿತ ವರದಿಗಳನ್ನು ಮಂಡಿಸಲು ಉಪ ಮಹಾಪೌರರ ನೇತೃತ್ವದಲ್ಲಿ ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ನಅಇ 639 ಎಂಎನ್‌ವೈ 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು